ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 436/2017
ಪಿ.ಡಬ್ಲ್ಯೂ :4

ದಿನಾಂಕಃ 22-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಮಾನ್ಯ ಶ್ರೀ ಎ.ಜಿ.ಪಿ.ಯವರಿಂದ

1. ನಮ್ಮ ಮನೆ ಇರುವುದು ತಲ್ಲೂರು ಕೋಟೆಬಾಗಿಲು ಬೊಬ್ಬರ್ಯ ದೇವಸ್ಥಾನ. ನಮ್ಮ ಮನೆಗೆ ನಂಬರ್ ಕೊಟ್ಟಿರುವುದಿಲ್ಲ. ಕೋಟೆಬಾಗಿಲು ರಸ್ತೆ ಅಂತ ರಸ್ತೆಗೆ ಹೆಸರು ಇರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಇರುತ್ತೇವೆ. ನಮ್ಮದು ಗುಡಿಸಿನ ರೀತಿ ಮನೆ ಇರುತ್ತದೆ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಮನೆ ಇರುವುದು ಸರ್ವೆ ನಂಬರ್ 168 ಪಿ 1 ರಲ್ಲಿ. ಅದರ ಒಟ್ಟು 68 ಸೆಂಟ್ಸ್ ವಿಸ್ತೀರ್ಣ ಇರುತ್ತದೆ. ಜಾಗದ RTC ಸರ್ಕಾರದ ಹೆಸರಿನಲ್ಲಿರುತ್ತದೆ. ನಮ್ಮ ಮನೆಯ ಇರುವ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

2. ಸಾಕ್ಷಿಗೆ ಮುಖ್ಯ ವಿಚಾರಣೆ ನೋಡಿ ಒಪ್ಪಿ ಕೊಂಡಿದ್ದು, ಮಾಹಿತಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಆಂಗ್ಲ ಬಾಷೆ ಬರುತ್ತದೆ. ನಾನು ಸರ್ವೆ ನಂಬರ್ ನ ಮನೆಯಲ್ಲಿ ವಾಸ ಇದ್ದೇನೆ ಎಂದು ಸಿಡಿ ಮತ್ತು ದಾಖಲೆ ಕೊಟ್ಟಿರುತ್ತೇನೆ. ನ್ಯಾಯಲಯಕ್ಕೆ ಬೇಕಾದ ದಾಖಲೆಗಳನ್ನು ಕೊಟ್ಟಿರುತ್ತೇನೆ. RTC ಸರ್ಕಾರದ ಜಾಗ ಎಂದು ಕೊಟ್ಟಿರುತ್ತೇನೆ. ಯಾವಾಗ ಪೋಟೋ ತೆಗೆದಿರುವುದು ಎಂದು ನೆನಪಿರುವುದಿಲ್ಲ. 5 ರಿಂದ 6 ವರ್ಷದ ಒಳಗೆ ತೆಗೆದಿರಬಹುದು ಎಂದು ನುಡಿಯುತ್ತಾರೆ. ಪೋಟೋವನ್ನು ನಮ್ಮ ಪಕ್ಕದ ಮನೆಯವರು ತೆಗೆದಿರುತ್ತಾರೆ. ನಿ.ಪಿ.8 ರ ದಾಖಲೆಯನ್ನು ಎಷ್ಟು ಗಂಟೆಗೆ ತೆಗೆಯಲಾಗಿದೆ ಎಂದು ಗೊತ್ತಿರುವುದಿಲ್ಲ.

3. ಗುಡಿಸಲನ್ನು ಕಟ್ಟಿ 8 ರಿಂದ 9 ವರ್ಷ ಆಗಿರುತ್ತದೆ. ಪ್ರಕರಣ ದಾಖಲಿಸುವ ಪೂರ್ವದಲ್ಲಿ ಗುಡಿಸಲನ್ನು ಕಟ್ಟಿರುತ್ತೇವೆ ಎಂದರೆ ಸರಿ. ಸರ್ಕಾರಕ್ಕೆ ತುಂಬಾ ಸಲ ಅರ್ಜಿ ಕೊಟ್ಟಿರುತ್ತೇನೆ. ಪಂಚಾಯತಿಯಿಂದ ನೀರಿನ ಸಂಪರ್ಕ ತೆಗೆದುಕೊಂಡಿರುತ್ತೇನೆ. ನೀರಿನ ಟ್ಯಾಪ್ ಇರುತ್ತದೆ. ಆದರೆ ಬಿಲ್ಲು ಕಟ್ಟುತ್ತಿರುವುದಿಲ್ಲ. ಸದರಿ ನೀರಿನ ಟ್ಯಾಪ್ ನ್ನು ದಾವಾ ಸಲ್ಲಿಸುವ ಪೂರ್ವದಲ್ಲಿ

ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಅದಕ್ಕೂ ಪೂರ್ವದಲ್ಲಿ ಇತ್ತು ಎಂದು ನುಡಿಯುತ್ತಾರೆ. ವಿದ್ಯುತ್ ಸಂಪರ್ಕ ನಾನು ತೆಗೆದುಕೊಂಡಿರುವುದಿಲ್ಲ. ಫೋಟೋವನ್ನು ಹೊರತು ಪಡಿಸಿ ಬೇರೆ ಏನು ಇರುವುದಿಲ್ಲ.

4. ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ನಮ್ಮ ಹೆಸರಿನಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಜಾಗ ಸರ್ಕಾರಿ ಜಾಗ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಪೂರ್ವದಲ್ಲಿ ನೋಟಿಸು ಕೊಟ್ಟಿರುತ್ತೇನೆ. ಸಾಕ್ಷಿ ಪುನಃ ಲಿಖಿತವಾಗಿ ನೋಟಿಸು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 168 ಸರ್ಕಾರಿ ಜಾಗ ಎಂದರೆ ಸರಿ. ಗುಡಿಸಲು ಕಟ್ಟಿಕೊಳ್ಳಿ ಎಂದು ಯಾರು ಹೇಳಿರುವುದಿಲ್ಲ. ನಮ್ಮ ಅಪ್ಪ, ಅಮ್ಮ, ಅಜ್ಜ ಅದೇ ಊರಿನಲ್ಲಿ ಇದ್ದೇವು. 7 ಮಂದಿ ಒಂದೇ ಮನೆಯಲ್ಲಿ ಇರಲು ಆಗದೇ ಇರುವುದರಿಂದ ನಾನು ಪಕ್ಕದಲ್ಲಿ ಒಂದು ಮನೆ ಕಟ್ಟಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ಸರ್ಕಾರಕ್ಕೆ ಜಾಗ ಮಂಜೂರು ಮಾಡಿಕೊಡಿ ಎಂದು ಅರ್ಜಿ ಕೊಟ್ಟಿರುತ್ತೇನೆ. ಸಾಕ್ಷಿ ಬರವಣಿಗೆ ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅವರು ಜಾಗ ಖಾಲಿ ಮಾಡಿ ಎಂದು ನೋಟಿಸು ಕೊಟ್ಟಿರುವುದಿಲ್ಲ. 1 ನೇ ಪ್ರತಿವಾದಿ ದಿನಾಂಕ 17-11-2017 ರಂದು ಸರ್ಕಾರಿ ಜಾಗವನ್ನು ಅತಿಕ್ರಮಿಸಿದ್ದು ಅದನ್ನು ತೆರವು ಮಾಡಿ ಎಂದು ನೋಟಿಸು ಕೊಟ್ಟಿದ್ದರು ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ ಆದರೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಆ ನೋಟಿಸು ಕೊಟ್ಟ ನಂತರ ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾವು ಅದೇ ಜಾಗದಲ್ಲಿ ಮನೆ ಕಟ್ಟಿಕೊಳ್ಳಬೇಕು ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ.

6. ಯಾವುದೇ ದಾಖಲಾತಿಗಳು ಇಲ್ಲದಿದ್ದರೂ ಸರ್ಕಾರಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮನೆ ಕಟ್ಟಲು ಜಾಗ ಬೇಕು ಅಂತ ಈ ಪ್ರಕರಣ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ